INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-6, Issue -5, September--October, 2024,
PageNo,78-86
Peer -Reviewed, Refereed Journal

# ಕುವೆಂಪು ಅವರ ಸಾಹಿತ್ಯದಲ್ಲಿ ಕಾಯಕ

ಶ್ರೀಮತಿ ರಶ್ಮಿತ. ಎಲ್‌ಆರ್.[1]

'ಕಾಯಕದಿಂದ ಬಂದ ಕಾರೆಯ ಸೊಪ್ಪಾದರೂ ಲಿಂಗಕ್ಕರ್ಪಿತ' ಎಂದು ಸಾರಿದ ವಚನಕಾರರನ್ನು ಬಿಟ್ಟರೆ ಕಾಯಕದ ಮಹತ್ವವನ್ನು ಎತ್ತಿ ಹಿಡಿದವರು ಕುವೆಂಪು ಅವರು. ಕನ್ನಡ ಸಾಹಿತ್ಯದ ಸಂದರ್ಭದಲ್ಲಿ 'ಕಾಯಕದಿಂದ ಬಂದ ಕಾರೆಯ ಸೊಪ್ಪಾದರೂ ಲಿಂಗಕ್ಕರ್ಪಿತ', 'ಕಾಯಕವೇ ಕೈಲಾಸ' ಎಂದು ಕಾಯಕದ ಮಹತ್ವವನ್ನು ಸಾರಿದ ವಚನಕಾರರಂತೆಯೇ 'ನೇಗಿಲ ಗೆರೆಯೇ ಸಗ್ಗದ ಹಾದಿ' ಎಂದ ಕುವೆಂಪು ಅವರನ್ನು ಹೊರತುಪಡಿಸಿದಂತೆ ಚರ್ಚಿಸುವುದಾಗಲೀ, ಮಾತನಾಡುವುದಾಗಲೀ ಸುಲಭಕ್ಕೆ ಸಾಧ್ಯವಾಗುವಂತಹದಲ್ಲ. ಕಾಯಕ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವ ಕುವೆಂಪು ಅವರ 'ನೇಗಿಲಯೋಗಿ' ಕವಿತೆ 'ರೈತಗೀತೆ'ಯಾಗಿರುವುದು ನಾಡಗೀತೆಯಂತೆಯೇ ಕನ್ನಡ ಸಾರಸ್ವತ ಲೋಕಕ್ಕೆ ಮೆರಗು. ಕುವೆಂಪು ಅವರು ಸಾಹಿತ್ಯದ ಮೂಲಕ ಸಾಮಾಜಿಕ ಜೀವನದ ಎಲ್ಲಾ ಮಗ್ಗಲುಗಳನ್ನು ದರ್ಶಿಸಿದ್ದಾರೆ. ಅವರು ಬೆಳೆದ ಪರಿಸರದಲ್ಲಿ ಕಂಡುಂಡ ನೋವು-ನಲಿವುಗಳು ಮಹಾತ್ಮರ ಪ್ರೇರಣೆಗಳು ದಾರ್ಶನಿಕರನ್ನಾಗಿಮಾಡಿವೆ.

'ಜಲಗಾರ' ನಾಟಕದಲ್ಲಿ ಜಲಗಾರನಿಗೆ ಶಿವನ ಗುಡಿಯ ಪ್ರವೇಶವಿಲ್ಲದ ಬಗ್ಗೆ ಬಹಳ ಗಂಭೀರವಾಗಿ ಯೋಚಿಸಿರುವ ಕುವೆಂಪು ಶಿವನನ್ನೇ ಜಲಗಾರನ ಮುಂದೆ ತಂದು ನಿಲ್ಲಿಸುವ ನಡೆ ಅಸ್ಪೃಶ್ಯ ಕಾಯಕವೇ ಪ್ರಾಧಾನ್ಯತೆ ಪಡೆಯುತ್ತದೆ. ಶಿವನನ್ನು ಕಾಣಲು ಪುರೋಹಿತ್ಯ ಮಾಡಬೇಕಾಗಿಲ್ಲ. ಜಲಗಾರನಾಗಿಯೂ ಕಾಯಕದ ಮೂಲಕ ಶಿವನ ಸನಿಹಕ್ಕೆ ತಲುಪಬಹುದೆಂಬುದಾಗಿದೆ. ಕುವೆಂಪು ಅವರೇ ಹೇಳುವಂತೆ ಜಲಗಾರ ನಾಟಕದ ಆಶಯವೇ ಶೋಷಿತರನ್ನು ದೇವಾಲಯಗಳಿಂದ ದೂರ ಉಳಿಯುವಂತೆ ಮಾಡುವುದೇ ಆಗಿದೆ. ಆದರೆ ಪ್ರಸ್ತುತದಲ್ಲಿ ಜನರು ತಮ್ಮ ದುಡಿಮೆಯ ಸಂಪಾದನೆಯನ್ನು ಮೌಢ್ಯಾಚಾರಣೆಯಲ್ಲಿ ಕಳೆಯುತ್ತಿರುವುದು ವಿಪರ್ಯಾಸ. ಜಲಗಾರನ ಸ್ವಾರ್ಥರಹಿತ ಕಾಯಕವೇ ಶ್ರೇಷ್ಠ ಎಂಬುದನ್ನು ಬಹಳ ಮಾರ್ಮಿಕವಾಗಿ ಕಟ್ಟಿಕೊಟ್ಟಿದ್ದಾರೆ. ಶಿವಾಲಯಕ್ಕೆ ನಿಷೇಧವಿತ್ತವರಿಗೆ 'ಕರ್ಮವಾರಾಧನೆ, ಸೇವೆಯೇ ಪೂಜೆ, ನನ್ನ ಭಾಗಕ್ಕೆ ಪೊರಕೆ ಆರತಿ' ಎಂಬುದು

[1] .ಸಂಶೋಧಕರು,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು-06

ಜಲಗಾರನ ಉತ್ತರ. ಹೀಗೆಯೇ ಗುಡಿಯ ಶಿವನನ್ನು ನಿರಾಕರಿಸುತ್ತಾ ಶಿವನಂತೆ! ನನ್ನ ಶಿವನೀ ಮಣ್ಣಿನಲ್ಲಿಹನು. ನನ್ನ ಶಿವ ಕೊಳೆತ ಕಸದೊಳಗಿಹನು' ಎಂದು ಕಾಯಕ ರೂಪದ ಸಮಾಜನಿಷ್ಠೆಯೇ ನಿಜವಾದ ಪೂಜೆಯೆಂಬುದನ್ನು ಇಂತಹ ಅನೇಕ ಮಾತುಗಳಲ್ಲಿ ಜಲಗಾರನ ಮೂಲಕ ವ್ಯಕ್ತಪಡಿಸಿದ್ದಾರೆ.

ಜನರು ಕಾಯಕದಲ್ಲಿ ಶಿವನನ್ನು ಕಂಡವರು. ಇದನ್ನು ಮನಗಂಡಿರುವ ಕುವೆಂಪು ಅವರು ಜಲಗಾರನ ನೀನೆಲ್ಲಿರುವೆ? ಎಂಬ ಪ್ರಶ್ನೆಗೆ ಶಿವನ ಮೂಲಕ ಮನೋಜ್ಞವಾಗಿ ಉತ್ತರಿಸಿದ್ದಾರೆ.

**"ಬೀದಿ ಗುಡಿಸುವ ಬಡವನೆದೆಯಲಿ ನಾನಿರುವೆ।**
**ಉಳುತಿರುವ ಒಕ್ಕಲಿಗನಡೆಯಲಿ ನಾನಿರುವೆ।**
**ಎಲ್ಲಿ ಹೊಲೆಯನು ನನ್ನ ಕಾರ್ಯದಲಿ ತೊಡಗಿಹನೊ**
**ಅಲ್ಲಿ ನಾನವನ ಪಕ್ಕದೊಳಿರುವೆ"**

ಇಲ್ಲಿ ಶಿವನೇ ಕಾಯಕ ಸಂಸ್ಕೃತಿಯ ಪ್ರತೀಕವಾಗಿ ನೆಲೆಸಿದ್ದಾನೆ. ವಚನ ಸಾಹಿತ್ಯದಂತೆ ಕುವೆಂಪು ಸಾಹಿತ್ಯದಲ್ಲಿ ಶಿವನನ್ನು ಕಾಯಕದಲ್ಲೇ ಕಾಣಬೇಕಾಗಿರುವುದು ಸರ್ವಮಾನ್ಯವಾದದು. 'ಇಕ್ಷುಗಂಗೋತ್ರಿ'ಯಲ್ಲಿ ಬರುವ

**"ಅಧ್ಯಕ್ಷನೊ ಸೇನಾನಿಯೊ**
**ಕಮ್ಮಾರನೊ ಚಮ್ಮಾರನೊ**
**ಕಾಯಕವೆಲ್ಲವು ಪೂಜ್ಯ"**

ವೆನ್ನುವುದು ಕಾಯಕದಲ್ಲಿ ಎಲ್ಲರೂ ಸಮಾನರೇ ಆಗಿರುತ್ತಾರೆ. ಕಾಯಕದಲ್ಲಿ ಸಾಮಾಜಿಕಾರ್ಥಿಕ ವಿಚಾರಗಳು ಕೀಳಲ್ಲ. ಕುವೆಂಪು ದೃಷ್ಟಿಯಲ್ಲಿ ಅಧ್ಯಕ್ಷನ ಕಾಯಕವೂ ಒಂದೇ ಚಮ್ಮಾರನ ಕಾಯಕವೂ ಒಂದೇ. ಕಾಯಕದಲ್ಲಿ ತರತಮವೆಣಿಸದೆ ಪೂಜ್ಯತೆಯಿಂದ ನೋಡಬೇಕೆನ್ನುವುದೇ ಅವರ ಆಶಯ. ಅಧ್ಯಕ್ಷ ಹುದ್ದೆಯಲ್ಲಿದ್ದು ನೀಚ ಕಾರ್ಯದಲ್ಲಿ ತೊಡಗಿದರೇನು ಪ್ರಯೋಜನವೆಂಬಂತೆ, ಚಮ್ಮಾರನು ಸೋಮಾರಿಯಾದರೇನು ಪ್ರಯೋಜನವಿಲ್ಲ. ಕುವೆಂಪು ಹೇಳುವಂತೆ 'ಯಾರು ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ, ಕಾಯಕನಿಷ್ಠೆಯೇ ಮುಖ್ಯ. ಉನ್ನತ ಉದ್ಯೋಗ ಬಯಸಿ ಚಮ್ಮಾರ, ಕಮ್ಮಾರ ಉದ್ಯೋಗಗಳನ್ನು ಕನಿಷ್ಠವೆಂದು ಬಗೆಯುವವರ ಮೇಲೆ ಕುವೆಂಪು ಅವರಿಗೆ ಅಸಹನೆ ಇದೆ.

ಹಾಳೂರು ಎಂಬ ನೀಳ್ಗವನದಲಿ ನಗರೀಕರಣದ ಪ್ರಭಾವ, ಅದರ ದುಷ್ಪರಿಣಾಮ, ಹಳ್ಳಿಗರು ಪಟ್ಟಣಕ್ಕೆ ವಲಸೆ ಹೋಗುತ್ತಿರುವ ಸನ್ನಿವೇಶವನ್ನು ಕುವೆಂಪು ಚಿತ್ರಿಸಿದ್ದಾರೆ.

**“ಪುರಗಳನು ಸೇರಿದರು ಹಳ್ಳಿಯವರೆಲ್ಲಾ;**
**ಹಳ್ಳಿ ನಿರ್ಜನವಾಯ್ತು; ಕೇಳುವವರೆ ಇಲ್ಲ.**
**ನಲಿದಾಡುತ್ತಿದ್ದಿತೈ ನಮ್ಮೂರು ಅಂದು**
**ಕಳೆಯಿಲ್ಲದಾಗಿಹುದು ಹಾಳೂರು ಇಂದು”**

ಜನರು ತಮ್ಮ ಗ್ರಾಮೀಣ ಕೆಲಸಗಳನ್ನು ಬಿಟ್ಟು, ನಗರದ ಬದುಕಿಗೆ ಆಸೆಪಟ್ಟು ಹಳ್ಳಿಯ ತೊರೆದ ಪರಿಣಾಮ ಹಳ್ಳಿಗಳು ಹಾಳೂರಾಗಿದೆ. ನಗರ ಕಾಯಕದಲ್ಲಿ ಬರುವ ಹಣದಿಂದ ‘ಪಾಯಸವನುಂಡರೂ ಪುರ ಅವರಿಗೆ ನರಕಲೋಕ’. ಅದೇ ಹಳ್ಳಿಯ ಕೆಲಸಗಳಿಂದ ಸಿಗುವ ಅತ್ಯಲ್ಪ ಹಣದಲ್ಲಿ ‘ಗಂಜಿಯುಂಡರು ಹಳ್ಳಿಯದು ಪರಮನಾಕ’ ಎಂಬುದು ಕುವೆಂಪು ಅವರ ನಿಲುವು. ಕಾಯಕವೆಲ್ಲವೂ ಪೂಜ್ಯವೆಂದಿದ್ದ ಕುವೆಂಪು ನಗರದ ಕಾಯಕ ಜೀವನದ ಬಗ್ಗೆ ಅಪಸ್ವರವೆತ್ತಿದ್ದಾರೆ. ಕಾರಣವಿಷ್ಟೇ ನಗರದ ಬದುಕು ದುರಾಸೆಯಿಂದ ಕೂಡಿರುತ್ತದೆ. ನಗರದಲ್ಲಿ ಹಳ್ಳಿಯಂತೆ

**“ಅಂದು ನಾವಾಲಿಸಿದ ಸುತರ ಕೂಗಿಲ್ಲ,**
**ಅಂದು ನಮ್ಮನು ಕರೆದ ಹಿತವಚನವಿಲ್ಲ,**
**ಹಳ್ಳಿಯಿದು ಪಟ್ಟಣದ ಪಾಲಾಯಿತಲ್ಲ**
**ಹಳ್ಳಿಗರು ಪುರಮಾರಿಗುಣಿಸಾದರಲ್ಲ!”**

ಗ್ರಾಮೀಣ ಬದುಕಿನಲ್ಲಿರುವ ಬಹುಮುಖೀ ಕಾಯಕ ಸಂಸ್ಕೃತಿಯ ನಾಶದ ಬಗ್ಗೆ ಕುವೆಂಪು ಇಲ್ಲಿ ಪ್ರಸ್ತಾಪಿಸುತ್ತಾರೆ. ವಸಾಹತುಶಾಹಿ ಆಕ್ರಮಣಕ್ಕೆ ಕುವೆಂಪು ಆರಂಭದಿಂದಲೇ ಪ್ರತಿಕ್ರಿಯಿಸುತ್ತಿದ್ದಾರೆ.

**“ನಿನ್ನ ಕೈಗಾರಿಕೆಗಳೀಗೆಲ್ಲಿ? ಎಲ್ಲಿ?**
**ಮಾಯವಾದುವೆ ಎಲ್ಲ ಎಲೆ ಮುದ್ದು ಹಳ್ಳಿ?**
**ಅಕ್ಕಸಾಲಿಗರೆಲ್ಲಿ? ಕಮ್ಮಾರರೆಲ್ಲಿ**
**ನಿನಗೆ ವಸನನವನಿತ್ತ ನೆಯ್ಗೆಯವನಿತ್ತ ನೆಯ್ಗೆಯವರೆಲ್ಲಿ?**
**ನಿನ್ನ ಅಂದಿನ ಕುಶಲ ಕಲೆಗಳೀಗೆಲ್ಲಿ?**
**ಪರರ ಕೈ ಹಾರೈಸದಾ ಸುಖವದೆಲ್ಲಿ?**
**ದೇಶವೆಲ್ಲವ ತುಂಬೆ ಅತಿಭೋಗರೋಗ**
**ಕುಶಲ ಕಲೆಗಳು ಮಾಯವಾದುವೈ ಬೇಗ”**

ಗ್ರಾಮೀಣ ಸಂಸ್ಕೃತಿ ಅಡಗಿರುವುದು ಕುಶಲಕರ್ಮಿಗಳಲ್ಲಿ. ಅಭಿವೃದ್ಧಿಯ ನೆಪದಲ್ಲಿ ಸಾವಿರಾರು ಕುಶಲಕರ್ಮಿಗಳ ಬದುಕನ್ನು ಯಾತನಮಯಗೊಳಿಸುವ ಅಭಿವೃದ್ಧಿ ಪಥದ ಬಗೆಗಿನ ಸಂದೇಹ ನೋವು ಇಲ್ಲಿದೆ. ಗ್ರಾಮೀಣ ಕಾಯಕವನ್ನು ಯಾಂತ್ರಿಕ ಉಪಕರಣಗಳು ಕಿತ್ತುಕೊಂಡಿರುವುದು ದುರಂತವಾಗಿದೆ. ಈ ಯಾತ್ರಿಕ ವಸ್ತುಗಳು ನಿರ್ನಾಮದ ಯಂತ್ರವಾಗದೆ, ನಿರ್ಮಾಣದ ಯಂತ್ರ ಎಂಬ ಆಧುನಿಕ ಪರಿಕಲ್ಪನೆಯ ದುರಂತ ವ್ಯಂಗ್ಯವಿದು. ಇಪ್ಪತ್ತರ ದಶಕದಲ್ಲೇ ಕುವೆಂಪು ಅವರು ಭೋಗ ಸಂಸ್ಕೃತಿ ಹೇಗೆ ಸಾಮಾನ್ಯ ಜನರ ಕಾಯಕದ ಮತ್ತು ಜೀವನ ವಿಧಾನದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂಬುದನ್ನು ಚಿಂತಿಸಿದ್ದರು. 'ಆಳಾಗಿ ದುಡಿ, ಅರಸಾಗಿ ಉಣ್ಣು' ಎನ್ನುವ ಗಾದೆಯನ್ನು ಧ್ವನಿಸುವಂತಿರುವುದನ್ನು ಕುವೆಂಪು ಅವರ 'ಕೋಗಿಲೆ ಮತ್ತು ಸೋವಿಯತ್ ರಷ್ಯಾ' ಕವನದಲ್ಲಿ ಗುರುತಿಸಬಹುದು.

**"ಶ್ರೀಮಂತರಿರಲಿಲ್ಲ ಶ್ರೀಮಂತರೇ ಎಲ್ಲ!**
**ಆಳ್ವರಸರಲಿಲ್ಲ; ಅರಸರೇ ಆಳ್ಗಳೆಲ್ಲ!**
**ಹೆಚ್ಚು ಕಡಿಮೆಗಳಿಲ್ಲ; ಮೇಲುಕೀಳುಗಳಿಲ್ಲ;**
**ಕೆಲಸವಿಲ್ಲದ ಅಲಸಗಾರನಿಗೆ ಅಲ್ಲಿ ಕೂಳಿಲ್ಲ;**
**ಕೆಲಸವೆಂದರೆ ಉಸಿರು! ಕೆಲಸವೇ ಬಾಳೆಲ್ಲ!**
**ಆಳು ತನಗಾಗಿ ತಾ ದುಡಿಯಬಾರದು ಅಲ್ಲಿ;**
**ದುಡಿಮೆಯನಿಬರಿಗಾಗಿ ತಾನೊಬ್ಬನನಿಬರಲ್ಲಿ!**
**ಸರ್ವಮನುಜರಿಗಾಗಿ ಸೃಷ್ಟಿ**
**ಎಂಬ ಸಮದೃಷ್ಟಿ"**

ರಷ್ಯಾ ದೇಶವು ಕಾಯಕಕ್ಕೆ ಕೊಟ್ಟ ಪ್ರಾಧಾನ್ಯತೆಯನ್ನು ಈ ಸಾಲುಗಳ ಮೂಲಕ ಕವಿ ಕುವೆಂಪು ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ರೀತಿ ಮೆಚ್ಚುಗೆ ಹೊಂದಿದ್ದಾರೆಂದರೆ ಭಾರತೀಯ ಕಾಯಕ ಸಂಸ್ಕೃತಿಯ ಬಗ್ಗೆ ಅವರಿಗೆ ಅಸಮಾಧಾನವಿದೆ. ಸ್ಪೃಶ್ಯರು ಶ್ರಮಿಕರ ದುಡಿಮೆಯಲ್ಲಿ ಜೀವನ ಸಾಗಿಸುವ ಸಂಸ್ಕೃತಿ ಹೀನವಾದದು. ಅದಕ್ಕೆ ಭಾರತದ ಕಾಯಕ ಸಂಸ್ಕೃತಿಯಲ್ಲಿ ಹೆಚ್ಚು–ಕಡಿಮೆ ಹಣ ಗಳಿಸುವ ಲಿಂಗಭೇದ, ಮೇಲು–ಕೀಳಿರುವ ಜಾತಿಭೇದ ರಷ್ಯಾದಲ್ಲಿ ಹೆಚ್ಚು–ಕಡಿಮೆಗಳಿಲ್ಲ, ಮೇಲು–ಕೀಳುಗಳಿಲ್ಲ ಎಂದಿದ್ದಾರೆ. ಸ್ವಾರ್ಥ ಪರವಾದ ಕಸುಬುಗಳ ಸೇವೆಗಾಗಿ ಇರುವ ಇನ್ನಿತರ ಶ್ರಮಿಕ ಕಸುಬುಗಳು ಅರ್ಥಹೀನವಾದುದೆಂಬುದು ಕುವೆಂಪು ಅವರಿಗೆ ಮನನವಾಗಿದೆ. ಇಲ್ಲಿ ತನಗಾಗಿ ಇರುವಂತೆ ರಷ್ಯಾದಲ್ಲಿ 'ದುಡಿಮೆಯನಿಬರಿಗಾಗಿ; ತಾನೊಬ್ಬನನಿವರಲ್ಲಿ! ಸರ್ವಮನುಜರಿಗಾಗಿ ಸೃಷ್ಟಿ, ಎಂಬ ಸಮದೃಷ್ಟಿ' ಎಂಬ

ಮತ್ತೊಬ್ಬರಿಗಾಗಿ ದುಡಿಯುವ ಕೈಗಳ ಸೃಷ್ಟಿ, ಸಮದೃಷ್ಟಿ ಚೈತನ್ಯದಾಯಕವಾಗಿದೆ. 'ಕಾಗೆ ಒಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಬಂಧುಬಳಗವನು' ಎನುವಂತೆ ರಷ್ಯಾದವರ ಬದುಕು ಸ್ತುತ್ಯರ್ಹವಾದುದು. ಕುವೆಂಪು ಅವರು ರಷ್ಯಾದ ಸಾಮಾಜಿಕ ಕ್ರಾಂತಿ, ಆರ್ಥಿಕ ಕ್ರಾಂತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರಾದರೂ, ಅಲ್ಲಿ 'ಬಾಳೆಂಬುದೊಂದು ನಿಷ್ಕರುಣ ಮಿಲ್ಲು, ಸರ್ವ ಪ್ರಾಣಿಗಳದಕ್ಕೆ ಬೀಸುವ ನೆಲ್ಲು' ಎಂದು ಯಾಂತ್ರಿಕ ಜೀವನದ ಅತಿರೇಕದ ಸ್ಥಿತಿಯನ್ನು ವಿಡಂಬಿಸಿದ್ದಾರೆ.

**"ಸತ್ತ ಕಲ್ಲುಗಳ ಮುಂದೆ ಅತ್ತು ಕರೆದುದು ಸಾಕು**
**ಜೀವದಾತೆಯನಿಂದು ಕೂಗಬೇಕು।**
**ಶಿಲೆಯ ಮೂರ್ತಿಗೆ ನೆಯ್ದ ಕಲೆಯ ಹೊದಿಕೆಯನೊಯ್ದು**
**ಚಳಿಯ ಮಳೆಯಲಿ ನವೆವ ತಾಯ್ಗೆ ಹಾಕು।"**

ಸಂಪ್ರದಾಯದ ಹೆಸರಿನಲ್ಲಿ ಜನರು ದೇವರೆಂದು ನಂಬಿರುವ ಕಲ್ಲುಗಳ ಮುಂದೆ ತಮ್ಮ ಕಷ್ಟಗಳನ್ನು ಅರುಹಿ ಪ್ರಾರ್ಥಿಸಿರುವುದು ಸಾಕು. ಇದರಿಂದ ಯಾವ ಪ್ರಗತಿಯು ಸಾಧ್ಯವಾಗಿಲ್ಲ. ಇದರ ಬದಲಾಗಿ ಭಾರತಾಂಬೆಯನ್ನು ಅಥವಾ ನಮ್ಮ ಜನ್ಮದಾತೆಯನ್ನು ಕೂಗಿ ಕರೆಯಬೇಕಾದ ಅನಿವಾರ್ಯತೆ ಇದೆ. ಸಂಪ್ರದಾಯದ ದೇವರ ಪರಿಕಲ್ಪನೆಯನ್ನು ನಿರಾಕರಿಸಿ, ದೂರ ನೂಕಿ 'ರಾಷ್ಟ್ರ'ವನ್ನು ಆ ಸ್ಥಾನದಲ್ಲಿ ರಾಷ್ಟ್ರ ನಿರ್ಮಾಣಮಾಡಬೇಕಾದ ಕ್ರಮ ಇಲ್ಲಿದೆ. ನಮ್ಮೆಲ್ಲ ಕಾಯಕದಿಂದ ಬಂದ ಸಂಪಾದನೆಯನ್ನು ದೇವರೆಂಬ ಶಿಲೆಯ ಮೂರ್ತಿಗೆ ಆರಾಧಿಸುವ ರೀತಿಯನ್ನು ಕುವೆಂಪು ವಿರೋಧಿಸುತ್ತಾರೆ. ನಮ್ಮ ಭವಿಷ್ಯಕ್ಕಾಗಿ ತಾಯಿ ಹಗಲಿರುಳು ಎನ್ನದೆ ಚಳಿಮಳೆಯಲ್ಲಿ ದುಡಿದು ಸವೆಯುತ್ತಿರುವ ತಾಯಿಗೆ ಹೊದಿಕೆಯನ್ನು ಹಾಕುವುದರ ಮೂಲಕ ಬದಲಾಗಬೇಕಾದ ಸಾಮಾಜಿಕ ಧೋರಣೆಯನ್ನು ಕವಿ ಕುವೆಂಪು ಸೂಚಿಸಿದ್ದಾರೆ. ನಮ್ಮ ಹಿರಿಯರು, ತಂದೆ-ತಾಯಿಗಳು ಅನಾಥರಂತಿರುವಾಗ ಪುಣ್ಯಾರ್ಜನೆಗಾಗಿ ಶಿಲಾಮೂರ್ತಿಗೆ ಸೇವೆ ಸಲ್ಲಿಸುವುದು ವಚನಕಾರ ಬಸವಣ್ಣ ಹೇಳುವಂತೆ 'ಉಣದ ಲಿಂಗಕ್ಕೆ ಭೋನವ ಹಿಡಿಯೆಂಬರು, ಉಂಬ ಜಂಗಮ ಬಂದರೆ ನಡೆ ಎಂಬರಯ್ಯ' ಎಂಬಂತಿದೆ.

'ಕೊಳಲು' ಸಂಕಲನದ 'ನೇಗಿಲಯೋಗಿ' ಕವಿತೆಯನ್ನು ಗಮನಿಸಿದಾಗ ರೈತನ 'ಕಾಯಕನಿಷ್ಠೆ' ಕಾಲದಷ್ಟೇ ಅಮೂಲ್ಯವಾದದು. ಸಮಯ ಎಂದು ನಿಲ್ಲುವುದಿಲ್ಲವಂತೆಯೇ ರೈತ ಎಂದೂ ತನ್ನ ಕಾಯಕವನ್ನು ನಿಲ್ಲಿಸುವುದಿಲ್ಲ. ಸಮಯ ನಿಂತರೆ, ರೈತ ತನ್ನ ಕಾಯಕ ನಿಲ್ಲಿಸಿದರೆ ಯಾರು ಉಳಿಯುವುದಿಲ್ಲ. ತನ್ನದೇ ಆದ ಹಾಡಿನೊಂದಿಗೆ ರೈತ ಕೃಷಿ ಕಾಯಕವನ್ನು ಬಿಡನೆಂದು ನೇಗಿಲ ಹಿಡಿದು

ಉಳುವವನು. ನೇಗಿಲಯೋಗಿಗೆ ಯಾವುದರ ಗೊಡವೆ ಇಲ್ಲದೆ ಉಳುವ ಯೋಗಿಗೆ ಸಾಮ್ರಾಜ್ಯಗಳು ಕೂಡ ಲೆಕ್ಕಕ್ಕಿಲ್ಲ. ಕರ್ಮಜೀವಿಯಾದ ರೈತನನ್ನು ಈ ಜಗತ್ತೇ ತಿರುಗಿ ನೋಡಬೇಕು ಎಂಬುದೇ ಆಗಿದೆ.

**"ರಾಜ್ಯಗಳುದಿಸಲಿ ರಾಜ್ಯಗಳಳಿಯಲಿ**
**ಹಾರಲಿ ಗದ್ದುಗೆ ಮುಕುಟಗಳು**
**ಮುತ್ತಿಗೆ ಹಾಕಲಿ ಸೈನಿಕರೆಲ್ಲ**
**ಬಿತ್ತುಳುವುದನವ ಬಿಡುವುದೆ ಇಲ್ಲ**
**ಲೋಕದೊಳೇನೆ ನಡೆಯುತಲಿರಲಿ**
**ತನ್ನೀ ಕಾರ್ಯವ ಬಿಡನೆಂದೂ**
**ನೇಗಿಲ ಹಿಡಿದ ಹೊಲದೊಳು ಹಾಡುತ**
**ಉಳುವ ಯೋಗಿಯ ನೋಡಲ್ಲಿ"**

ನೇಗಿಲ ಕುಳದೊಳಗಡಗಿದೆ ಕರ್ಮ, ನೇಗಿಲ ಮೇಲೆ ನಿಂತಿದೆ ಧರ್ಮ ಎಂದು ಹೇಳಿದ ಕುವೆಂಪು ಕೃಷಿಯನ್ನು ಉತ್ತುಂಗಕ್ಕೇರಿಸಿದ್ದಾರೆ. ಈ ರೈತನಿಂದಲೇ ಸರ್ವವೂ ಉಳಿದಿದೆ ಆದರೂ ಜಗತ್ತಿಗೆ ಅನ್ನ ನೀಡಿದ ರೈತ ಸರ್ವರಿಂದಲೂ ತಿರಸ್ಕಾರಕ್ಕೆ ಒಳಗಾಗುತ್ತಿರುವುದನ್ನು 'ಧನ್ವಂತರಿ ಚಿಕಿತ್ಸೆ' ಕಥೆಯಲ್ಲಿ ರೈತ ಸಮಾಜದ ಅತ್ಯಂತ ಕೆಳವರ್ಗದವನಾಗಿದ್ದಾನೆ. ರೈತ ದೇಶದ ಬೆನ್ನೆಲುಬು ಎಂಬ ಮಾತಿನ ಸಮರ್ಥನೆ ಇಲ್ಲಿದೆಯಾದರೂ ಇಡೀ ಜನತೆಯ ದೇಶದ ಭಾರ ಅವನ ಮೇಲಿರುವುದರಿಂದ ಅದನ್ನು ಹೊರಲಾರದೆ ರೈತ ಬೆಳೆಯುತ್ತಿದ್ದಾನೆ. ಸಂಘಟನೆ ಇಲ್ಲದ ಮತ್ತು ತನ್ನ ಮೇಲೆ ಬೀಳುವ ಆರ್ಥಿಕ ಸಾಮಾಜಿಕ ಭಾರವನ್ನು ಬೇರೆಯವರಿಗೆ ವರ್ಗಾಯಿಸಲಾರದ ದುರ್ಬಲತೆ ಇದಕ್ಕೆ ಕಾರಣ. ರೈತನ ಎದೆಯ ಮೇಲೆ ಸಮಸ್ತ ಚಕ್ರಾಧಿಪತ್ಯವು ಮಹಾಪರ್ವತಾಕಾರವಾಗಿ ನಿಂತಿತ್ತು. ವಿಶ್ವಾಮಿತ್ರ ಮತ್ತು ಪರಶುರಾಮ ನೋಡಿಕೊಂಡು ಬಂದಿದ್ದ ಆ ಮುಖ್ಯ ಪಟ್ಟಣ, ಅದರ ನೆತ್ತಿಯಲ್ಲಿ ರಾಜಿಸುತ್ತಿದೆ. ದೇವಾಲಯಗಳೂ, ವಿಶ್ವವಿದ್ಯಾನಿಲಯಗಳೂ, ಕ್ರೀಡಾ ಮಂದಿರಗಳೂ, ಪ್ರಮೋದವನಗಳೂ, ಕರ್ಮಸೌಧಗಳೂ, ಕಾರ್ಖಾನೆಗಳೂ, ರಾಜಪ್ರಸಾದಗಳೂ ತಮ್ಮ ಭಾರವನ್ನೆಲ್ಲ ರೈತನ ಎದೆಯ ಮೇಲೆ ಹಾಕಿ ಸಂಸ್ಕೃತಿ ಮತ್ತು ನಾಗರಿಕತೆ ಎಂಬ ಕೀರ್ತಿಯಿಂದ ಮೆರೆಯುತ್ತಿದೆ.

ಜಗಕ್ಕೆ ಹಸಿವು ತಣಿಸುವ ಶ್ರಮಜೀವಿ ರೈತನ ಬದುಕು ಬಡತನದ ಬೇಗೆಯಲ್ಲಿ ಬೇಯುತ್ತಿರುವುದಕ್ಕೆ ಈ ನಾಗರಿಕ ಸಮಾಜವೇ ಕಾರಣವೆಂಬುದು 'ಬಡತನದ' ಮೂಲಕ ಕುವೆಂಪು

ವಿಡಂಬನೆ ಮಾಡಿದ್ದಾರೆ. ದೇಶದ ಪ್ರಗತಿ ಸಾಧಿಸುತ್ತೇವೆಂದು ಹೇಳಿಕೊಳ್ಳುವ ರಾಜಕಾರಣಿಗಳು ಕಾರುಗಳ, ರೇಡಿಯೋಗಳ ದೊಡ್ಡ ಯಂತ್ರಗಳ ಕಾರ್ಖಾನೆಗಳನ್ನು ಸ್ಥಾಪಿಸಿ ಬಡತನವನ್ನು ನಿರ್ಮೂಲನೆ ಮಾಡಿದೆವೆಂದು ಭ್ರಮಿಸುತ್ತಾರೆ. ಆದರೆ ನಿಜವಾದ ಬಡತನ ನಿರ್ಮೂಲನೆ ದೇಶದ ಪ್ರಗತಿ, ರೈತರಿಗೆ ತೋರುವ ಗೌರವ ವಿಶ್ವಾಮಿತ್ರ, ಪರಶುರಾಮ, ಧನ್ವಂತರಿಯಂತಹವರಿಂದ ಮಾತ್ರ ಸಾಧ್ಯವೆನ್ನುವುದನ್ನು ಇಲ್ಲಿ ಸೂಕ್ಷ್ಮವಾಗಿ ಅಭಿವ್ಯಕ್ತಿಸಿದ್ದಾರೆ. ಪುರಾಣವನ್ನೇ ಧಿಕ್ಕರಿಸಿದ ಕುವೆಂಪು ರೈತನ ಗೋಳನ್ನು ಅರಿತು, ಸಮಸ್ಯೆಯನ್ನು ಬಗೆಹರಿಸಲು ಪುರಾಣ ಪುರುಷರನ್ನು ಆಯ್ಕೆ ಮಾಡಿಕೊಳ್ಳ ಬಯಸಿದ್ದು ಸಾಂಕೇತಿಕವಾಗಿದೆಯಾದರೂ ನೇಗಿಲಯೋಗಿಯ ಸಮಸ್ಯೆಯನ್ನು ಬಗೆಹರಿಸುವುದು ಪ್ರಸ್ತುತ ಅತ್ಯಂತ ಕ್ಲಿಷ್ಟಕರವಾದು ಎಂಬುದನ್ನು ತೋರಿಸುವುದೆ ಆಗಿದೆ. ರೈತರಿಗೆ ಸಾಕಷ್ಟು ಯೋಜನೆಗಳಿಲ್ಲದಿರುವಾಗಲು ಆ ಯೋಜನೆಗಳು ಯೋಜನಾದೂರದಲ್ಲಿ ನಿಂತು ರೈತನನ್ನು ಕಿರು ಗಣ್ಣಿನಿಂದ ನೋಡುತ್ತಿದೆ. ರೈತನಿಗೆ ತಲುಪಬೇಕಾದ ಯೋಜನೆಗಳು ಉಳ್ಳವರ ಮನೆ ಬಾಗಿಲಲ್ಲಿ ಶರಣಾಗಿ ಮೆಟ್ಟಿಲಾಗಿ ಮೇಲಂತಸ್ಥಿನ ಕಟ್ಟಡಕ್ಕೆ ಇಟ್ಟಿಗೆಯಾಗಿವೆ ಎಂದರೆ ತಪ್ಪಾಗಲಾರದು.

ಕುವೆಂಪು ಅವರ ದೃಷ್ಟಿಯಲ್ಲಿ ವೈಚಾರಿಕ, ವೈಜ್ಞಾನಿಕ ಕಾಯಕವೆಲ್ಲವೂ ಶ್ರೇಷ್ಠವೇ. ಡಾಂಭಿಕ ಕಾಯಕವನು ಅವರು ಎಂದೂ ಒಪ್ಪಿತ್ತಿರಲಿಲ್ಲ. ಅದರ ವಿರುದ್ಧ ತಮ್ಮ ಸಾಹಿತ್ಯದ ಮುಖೇನ ಸಮರೋಪಾದಿಯಲ್ಲಿ ಖಡ್ಗವನ್ನು ಝಳಪಿಸುತ್ತಾರೆ. 'ಧ್ರಾಂ ಧ್ರೀಂ ಧ್ರೂಂ' ಕವಿತೆಯಲ್ಲಿ ಮಹಮ್ಮದ್ ಘಜ್ನಿ ಭಾರತೀಯ ದೇವಾಲಯಗಳ ಸಂಪತ್ತನ್ನು ಕೊಳ್ಳೆ ಹೊಡೆಯಲು ಬೇಕಾದ ಸೈನ್ಯ ಶಸ್ತ್ರಾಸ್ತ್ರವನ್ನು ಹೊಂದಿಸಿಕೊಂಡು ದಾಳಿ ಮಾಡಿದರು. ಆದರೆ ಪುರೋಹಿತೋತ್ತಮರಿಗೆ ಇದು ಹೊಳೆಯಲಿಲ್ಲ. ಅವರಿಗೆ ಹೊಳೆದ್ದೆ ಬೇರೆಯೇ ಆಗಿತ್ತು.

**"ಒಡನೆಯೆ ಅರ್ಚಕರೆಲ್ಲಾ ಸೇರಿ**
**ಮಂತ್ರಾಲೋಚನೆ ಮಾಡಿದರು;**
**ಶಾಸ್ತ್ರಗಳೆಲ್ಲಾ ಕೇರಿ ತೂರಿ**
**ಬಹು ಸಂಶೋಧನೆ ಮಾಡಿದರು".**

ಹೀಗೆ ಪುರೋಹಿತರು ಧ್ರಾಂ ಧ್ರೀಂ ಧ್ರೂಂ ಮಂತ್ರಗಳ ಸಿದ್ಧತೆಯಲ್ಲಿ ಎಲ್ಲರಿಗೂ ಗೆಲ್ಲುವ ಭರವಸೆ ಕೊಟ್ಟರು.

**“ಓ ಸೋದರರೆ ಬೆದರುವುದೇತಕೆ?**

**ಖಡ್ಗಗಿಡ್ಗಗಳ ನೆರವು ಏತಕೆ**

**ಈ ಮಂತ್ರವ ಬಲವಿರೆ ನಮಗೆ**

**ಮ್ಲೇಚರ ಖಳದಳವಿಲ್ಲಿಗೆ ಬರಲಿ**

**ಸಾಸಿರ ಸಾಸಿರ ಸಾಸಿರವಿರಲಿ**

**ಒಂದೆ ಮಂತ್ರದಲಿ ಎಲ್ಲರ ಕೊಲ್ಲುವೆ”**

ಎನ್ನುತ್ತಾನೆ. ಇದರಿಂದ ಜನರು, ಪುರೋಹಿತರು ದೇವರ ಮೊರೆ ಹೋಗುತ್ತಾರೆ. ಇತ್ತ ಮಹಮ್ಮದನ ಸೈನ್ಯವು ನುಗ್ಗಿ ಯುದ್ಧದಲ್ಲಿ ಜಯಿಸಿ ಅಪಾರ ಸಂಪತ್ತನ್ನು ಕೊಳ್ಳೆ ಹೊಡೆಯುತ್ತದೆ. ಇಲ್ಲಿ ಯಾವ ಕಾಯಕ ಸಫಲವಾಯಿತು ಎನ್ನುವುದು ಸಾಮಾನ್ಯರಿಗೂ ತಿಳಿದಿರುವುದೇ ಆಗಿದೆ. ಆದರೆ ಇಂತಹದನ್ನು ಅರಿಯದ ಅನೇಕರು ಈಗಲೂ ಮೌಢ್ಯದ ಹೊಳೆಯಲ್ಲಿ ಮಿಂದೇಳುತ್ತಲೇ ಇದ್ದಾರೆ. ಗಾದೆಯ ಮಾತಿನಂತೆ ‘ಮಂತ್ರಕ್ಕೆ ಮಾವಿನಕಾಯಿ ಉದುರುವುದಿಲ್ಲ’ ಎನ್ನುವುದು ಕುವೆಂಪು ಅವರ ಕಾಯಕವಿಲ್ಲದೆ ಏನೂ ಘಟಿಸುವುದಿಲ್ಲ ಎಂಬ ವೈಜ್ಞಾನಿಕ ಕಾಯಕ ಸತ್ಯವನ್ನೇ ಕುರಿತು ಹೇಳುತ್ತದೆ.

ಕುವೆಂಪು ಅವರು ಶ್ರೀಸಾಮಾನ್ಯನನ್ನು ವಿಶ್ವಮಾನವ ಚೈತನ್ಯವಾಗಿ ಪರಿವರ್ತಿಸುವ ಮಹಾಕಾಯಕದಲ್ಲಿ ತೊಡಗಿಸಿಕೊಂಡರು. ಕಾಯಕ ಸದೃಶವಾದ ಧನ್ಯತೆಯನ್ನು ಕುವೆಂಪು ಅವರು “ಬಾಗಿಲೊಳು ಕೈ ಮಗಿದು ಒಳಗೆ ಬಾ ಯಾತ್ರಿಕನೆ, ಶಿಲೆಯಲ್ಲವೀ ಗುಡಿಯು.... ಕಲೆಯ ಬಲೆಯು।, ಎಂದು ಸೋಮನಾಥ ದೇವಾಲಯವನ್ನು ಕುರಿತು ಹೇಳಿದ್ದಾರೆ. ಸಾಮಾನ್ಯವಾಗಿ ಗುಡಿಗೆ ಬರುವುದು ದೇವರಲ್ಲಿ ತಮ್ಮ ಕಷ್ಟಗಳನ್ನು ಕಳೆಯಲು ಬರುತ್ತಾರೆ. ಆದರೆ ಕುವೆಂಪು ಅವರು ದೇಗುಲಕ್ಕೆ ಬರುವ ಯಾತ್ರಿಕನಿಗೆ ಕಂಬನಿ ಸುರಿಸುವ ದೇಗುಲವಲ್ಲವೆಂದು ಶಿಲ್ಪಿಗಳಿಂದಾದ ಕಲೆಯ ಬಲೆಯು ಎನ್ನುತ್ತಾರೆ. ಶಿಲ್ಪಿಗಳ ವಿಶಿಷ್ಟ ಸೂಕ್ಷ್ಮಮತಿಯ ಕಾಯಕಕ್ಕೆ ಧನ್ಯತೆಯನ್ನು ಅರ್ಪಿಸುವಂತೆ ಹೇಳಿ, ಶಿಲಾಕಲೆಯ ಮೂಲಕವೇ ಕಾವ್ಯ ಬರೆದ ಶಿಲ್ಪಿಗಳ ಕುಶಲತೆಗೆ ಬೆರಗಾಗಿ ಇಲ್ಲಿ ಕಾಲವೇ ಮೂಖವಾದಂತೆ ಕುವೆಂಪು ಅವರಿಗೆ ಕಂಡಿದೆ. ಕುವೆಂಪು ಅವರು ದೇಗುಲದಲ್ಲಿ ದೇವರ ಇರುವಿಕೆಯನ್ನು ಅಲ್ಲಗಳೆಯುತ್ತಲೇ, ಸಮಯದಷ್ಟೇ ಕಾಯಕವೂ ಕೂಡ ಬಹುಮುಖ್ಯವಾದುದು ಎಂಬುದನ್ನು ತೋರಿಸುತ್ತಲೇ ದೇಗುಲ ಕಾಯಕ ಸಂಸ್ಕೃತಿಯ ಪ್ರತೀಕವೆನ್ನುತ್ತಾರೆ. ತಮ್ಮ ಸಾಹಿತ್ಯದುದ್ದಕ್ಕೂ ಕುವೆಂಪು ಕಾಯಕಕ್ಕೆ ಕೊಟ್ಟ ಪ್ರಧಾನ್ಯತೆ ಅಪಾರವಾರವಾದುದು.

## ಪರಾಮರ್ಶನ ಗ್ರಂಥಗಳು


1. ಡಾ.ಪ್ರಧಾನ್ ಗುರುದತ್ತ –ಕುವೆಂಪು (ಜೀವನ ಮತ್ತು ಸಾಧನೆ) ನವಕರ್ನಾಟಕ ಪಬ್ಲಿಕೇಷನ, ಬೆಂಗಳೂರು,2018.
2. ಕುವೆಂಪು ಸಮಗ್ರಕಾವ್ಯ, ಕನ್ನಡ ವಿಶ್ವವಿದ್ಯಾಲಯ ಹಂಪಿ,2020.
3. ಕುವೆಂಪು ಸಮಗ್ರಕಾವ್ಯ, ಸಂಪುಟ–2, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ) ಕುಪ್ಪಳ್ಳಿ, ಶಿವಮೊಗ್ಗ,2013.
4. ಕುವೆಂಪು ಸಮಗ್ರಕಾವ್ಯ, ಸಂಪುಟ–3, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ) ಕುಪ್ಪಳ್ಳಿ, ಶಿವಮೊಗ್ಗ,2013.
5. ಶಿವರಾಮು ಕಾಡನಕುಪ್ಪೆ, ಕುವೆಂಪು ಸಾಹಿತ್ಯ ವಿಚಾರ, ಸಹ್ಯಾದ್ರಿ ಪ್ರಕಾಶನ ಮೈಸೂರು,1990.